ಶುಕ್ರವಾರ, ೦3 ಜನವರಿ 2014

# ಪ್ರಧಾನ ಮಂತ್ರಿಗಳ ಪತ್ರಿಕಾ ಗೋಷ್ಠಿಗೆ ಒಂದು ಪ್ರತಿಕ್ರಿಯೆ

**-ಅರುಣ್‌ಜೇಟ್ಲಿ**

ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಸಾರ್ವತ್ರಿಕಚುನಾವಣೆಯ ನಂತರತಮ್ಮ ಸ್ಥಾನಕ್ಕೆ ಪ್ರತಿಸ್ಪರ್ಧಿಯಾಗಿಲ್ಲ ಎಂಬ ವಿಚಾರವನ್ನು ತಿಳಿಸುವ ಉದ್ದೇಶದಿಂದ ಪ್ರಧಾನ ಮಂತ್ರಿಗಳು ಇಂದು ಪತ್ರಿಕಾ ಗೋಷ್ಠಿಯನ್ನುಕರೆದಿದ್ದರು.ತಮ್ಮ ನಿರ್ಗಮನದ ವಾರ್ತೆ ನೀಡುವಾಗಲಾದರೂ ಕೊನೆ ಪಕ್ಷಅವರು ಬಿಚ್ಚು ಮಾತಿನ ಸಂಭಾಷಣೆ ನಡೆಸುತ್ತಾರೆ ಎಂಬ ಅನಿಸಿಕೆ ಇತ್ತು.ಸತ್ವ ಶೋಧನೆಗೆಇದೊಂದು ಐತಿಹಾಸಿಕ ಅವಕಾಶ ಅವರಿಗೆ ಲಭಿಸಿತ್ತು.ಇಂತಹ ಸುವರ್ಣಾವಕಾಶವನ್ನುಅವರು ಕಳೆದುಕೊಂಡಿದ್ದಕ್ಕಾಗಿ ನನ್ನ ವಿಷಾದವಿದೆ.

ಇತ್ತೀಚೆಗೆ ನಡೆದ ವಿಧಾನಸಭೆಚುನಾವಣೆಯಲ್ಲಿಕಾಂಗ್ರೆಸ್ ಪಕ್ಷ ಹೀನಾಯ ಸೋಲುಂಡಿದೆ.ಮುಂಬರುವ ಸಾರ್ವತ್ರಿಕಚುನಾವಣೆಯಲ್ಲಿಅದಕ್ಕೆ ಭಾರಿ ವಿಪತ್ತುಕಾದಿದೆ.ಡಾ.ಮನಮೋಹನ್ ಸಿಂಗ್ ನೇತೃತ್ವದಯುಪಿಎ ಸರ್ಕಾರದ ದುರಾಡಳಿತದಿಂದಲೇ ಇಂತಹ ಪರಿಸ್ಥಿತಿ ಉದ್ಭವಿಸಿದೆ. ಹಣದುಬ್ಬರ ನಿಯಂತ್ರಣ, ನಿರುದ್ಯೋಗ ನಿವಾರಣೆ ಮತ್ತು ಭ್ರಷ್ಟಾಚಾರ ನಿಗ್ರಹಕಾರ್ಯದಲ್ಲಿ ಸರ್ಕಾರ ಅನುಭವಿಸಿದ ವೈಫಲ್ಯವನ್ನು ಪ್ರಧಾನ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಈ ಮೂರು ಅಂಶಗಳ ಸಂಯೋಜನೆಯೂಚುನಾವಣಾಅಧಃಪತನಕ್ಕೆಯೋಗ್ಯಕಾರಣವಾಗಿ ಪರಿವರ್ತಿಸಲಿದೆ. ಈ ಸತ್ಯಸಂಗತಿಒಪ್ಪದ ಪ್ರಧಾನ ಮಂತ್ರಿಗಳು, ಇತಿಹಾಸವೇತಮ್ಮನ್ನು ಅಳೆಯಲಿ ಎಂಬ ಅಭಿಲಾಶೆ ವ್ಯಕ್ತಪಡಿಸಿದ್ದಾರೆ. 'ಸಮಯವೇಎಲ್ಲವನ್ನುಉತ್ತರಿಸುತ್ತದೆ' ಎಂಬ ವಾಕ್ಯವನ್ನೇಅವರುತಮ್ಮ ಪತ್ರಿಕಾಗೋಷ್ಠಿ ಉದ್ದಕ್ಕೂ ಉಲ್ಲೇಖಿಸಿದ್ದಾರೆ.ಪ್ರಧಾನಮಂತ್ರಿಗಳ ಮಾತು ಸರಿಯಿಲ್ಲ. ಪ್ರಜಾಪ್ರಭುತ್ವದಲ್ಲಿ ಮತದಾರರೆತಮ್ಮ ಸಾಧನೆಯನ್ನು ಅಳೆಯುತ್ತಾರೆ.2009ರ ಚುನಾವಣೆಯಲ್ಲಿ ಮತದಾರರುತಮಗೆಜನಾದೇಶ ನೀಡಿದ ಪರಿಣಾಮ ಯುಪಿಎ-1ರ ಎಲ್ಲಾ ಭ್ರಷ್ಟಾಚಾರ ಪ್ರಕರಣಗಳನ್ನು ಜನ ಮನ್ನಿಸಿದ್ದಾರೆ ಎಂಬ ವಾದವನ್ನುಅವರು ಮಂಡಿಸಿದ್ದಾರೆ.ಆದರೆ 2013ರ ಚುನಾವಣಾ ಫಲಿತಾಂಶಗಳು ಅವರಕಾರ್ಯಶೂನ್ಯತೆಗೆಜನ ನೀಡಿದತೀರ್ಪುಎಂಬುದನ್ನು ಒಪ್ಪಿಕೊಳ್ಳಲು ಅವರು ಸಿದ್ಧರಿಲ್ಲ.

ಮಾಧ್ಯಮದವರೊಂದಿಗೆ ಪ್ರಧಾನ ಮಂತ್ರಿಗಳು ಕಟುವಾಗಿ ವರ್ತಿಸಿದ್ದಾರೆ, ವಿಪಕ್ಷಗಳೊಂದಿಗೆ ಕಟುವಾಗಿ ನಡೆದುಕೊಂಡಿದ್ದಾರೆ ಹಾಗೂ ನರೇಂದ್ರ ಮೋದಿ ಅವರಕುರಿತುತಮ್ಮಎಲ್ಲಾದ್ವೇಷವನ್ನು ಹೊರಹಾಕಿದ್ದಾರೆ.ಪ್ರಧಾನ ಮಂತ್ರಿಗಳು ಬಳಸುವ ಭಾಷೆ ಮತ್ತು ವಾಕ್ಯಗಳು ಘನತೆಗಾಂಭೀರ್ಯದಚೌಕಟ್ಟು ಮೀರಬಾರದು ಎಂಬ ಸಂಪ್ರದಾಯವನ್ನು ಪ್ರಧಾನ ಮಂತ್ರಿಗಳ ಕಚೇರಿ ಹಾಕಿಕೊಂಡಿದೆ.ಡಾ. ಮನಮೋಹನ್ ಸಿಂಗ್ ಇದಕ್ಕೆ ಸರಿಸಾಟಿಯಾಗಿ ವರ್ತಿಸುವಲ್ಲಿ ವಿಫಲರಾಗಿದ್ದಾರೆ.2002ರ ಗಲಭೆ ನಂತರ ನರೇಂದ್ರ ಮೋದಿಯಷ್ಟುತೀಕ್ಷ್ಣಸ್ವರೂಪದಅಗ್ನಿಪರೀಕ್ಷೆ ಎದುರಿಸಿದ ರಾಜಕಾರಣಿ ಭಾರತದಲ್ಲಿ ಮತ್ತೊಬ್ಬರಿಲ್ಲ. ಸರ್ವೋಚ್ಚ ನ್ಯಾಯಾಲಯ ನೇಮಿಸಿದ ವಿಶೇಷ ತನಿಖಾತಂಡ ಹಾಗೂ ನ್ಯಾಯಾಲಯಗಳು ಅವರನ್ನುದೋಷಮುಕ್ತರೆಂದು ಪರಿಗಣಿಸಿದೆ.ಸತತ ಮೂರು ಬಾರಿಅವರ ಪರವಾದಜನಾದೇಶ ಲಭಿಸಿದೆ.ಪ್ರಧಾನ ಮಂತ್ರಿ ಸ್ಥಾನಕ್ಕೆ

ಅವರಷ್ಟುಯೋಗ್ಯಅಭ್ಯರ್ಥಿ ಮತ್ತೊಬ್ಬರಿಲ್ಲಎಂದು ಸಾರ್ವಜನಿಕಅಭಿಪ್ರಾಯ ಸರ್ವೇಗಳು ತಿಳಿಸಿವೆ. ಆದರೂ ಮೋದಿಯವರಕುರಿತುಡಾ.ಮನಮೋಹನ್ ಸಿಂಗ್ ವಿನಾಶಕಾರಿ ವ್ಯಕ್ತಿ ಹಾಗೂ ಸಾಮೂಹಿಕ ಕೊಲೆಗಡುಕ ಎಂಬ ಪದಗಳನ್ನು ಬಳಸಿದ್ದಾರೆ. ಹಲವು ಬಾರಿ ವಿಚಾರಣೆಗೆ ಒಳಗಾದ ಓರ್ವ ವ್ಯಕ್ತಿಯ ವಿರುದ್ಧ ಸಾಕ್ಷಾಧಾರಗಳು ಇಲ್ಲದೆಯಿದ್ದರೂ, ಹೀಗೆ ಹರಿಹಾಯುವುದು ಸೂಕ್ತವಲ್ಲ. ಅವರಿಗೆ ಸಲ್ಲಬೇಕಾದಗೌರವ ಸಲ್ಲಲೇಬೇಕು. ಬಳಸಿದ ಭಾಷೆಯಿಂದ ಪ್ರಧಾನ ಮಂತ್ರಿಗಳು ತಮ್ಮ ಹುದ್ದೆಯಘನತೆಯನ್ನು ಕುಗ್ಗಿಸಿದ್ದಾರೆ.ಸಿಖ್ ಸಮುದಾಯಕ್ಕೆ ಸೇರಿದವರ ನರಮೇಧವನ್ನುದೇಶಈವರೆಗೂಕಂಡಿಲ್ಲ ಮತ್ತುಇದಕ್ಕೆಕಾರಣಕರ್ತರಾದವರನ್ನುಈವರೆಗು ಮತ್ತೆ ಹಚ್ಚಲು ಸಾಧ್ಯವಾಗಿಲ್ಲ. ನವೆಂಬರ್ 1, 1984ರಂದು ಈ ಹತ್ಯಾಕಾಂಡ ನಡೆದಾಗ ಅಂದಿನ ಪ್ರಧಾನ ಮಂತ್ರಿಯಕುರಿತುಇದೇ ಪದಗಳ ಬಳಕೆಯನ್ನು ಮಾಡಬಯಸುತ್ತಾರೆಯೆ.

ಒಬ್ಬ ವಿಫಲ ನಾಯಕನ ಪತ್ರಿಕಾಗೋಷ್ಠಿ ಅದಾಗಿತ್ತು.ಆಡಳಿತ ನಡೆಸುವಆಸಕ್ತಿಯನ್ನೇಅವರು ಕಳೆದುಕೊಂಡಿದ್ದಾರೆ.ಅವರಲ್ಲಿ ಪ್ರಾಮಾಣಿಕತೆಅತ್ಯಲ್ಪ. ತಮ್ಮ ಪಕ್ಷದವರಾದ ಮುಖ್ಯ ಮಂತ್ರಿಯ ವಿರುದ್ಧ ಲಭ್ಯವಿರುವ ಹೇರಳ ಸಾಕ್ಷಾಧಾರಗಳತ್ತ ನಿಗಾ ವಹಿಸುವ ಗೋಜಿಗುಅವರು ಹೋಗಿಲ್ಲ. ಭ್ರಷ್ಟಾಚಾರದಕುರಿತುಅವರದೃಷ್ಟಿಕೋನ ಸಂಕುಚಿತಗೊಂಡಿದೆ.ರಾಷ್ಟ್ರೀಯ ಭದ್ರತೆ ವಿಚಾರಗಳನ್ನು ಅವರು ಪ್ರಸ್ತಾಪಿಸಲೇಯಿಲ್ಲ. ಕಳೆದ ಕೆಲವು ವರ್ಷಗಳಿಂದ ಮಹಿಳೆಯರ ಮೇಲೆ ಆಗುತ್ತಿರುವ ಅಪರಾಧಗಳ ಬಗ್ಗೆ ಅವರುಚಕಾರವೆತ್ತಲಿಲ್ಲ. ಬಂಡವಾಳ ಹೂಡಿಕೆಚಕ್ರ ಹಾಗೂ ಆರ್ಥಿಕ ಚಟುವಟಿಕೆಗಳನ್ನು ಚುರುಕುಗೊಳಿಸುವ ಕುರಿತು ಹೆಚ್ಚಿನ ಗಮನ ಹರಿಸಲಿಲ್ಲ. ಕಲ್ಲಿದ್ದಲು ನಿಕ್ಷೇಪ ಹಂಚಿಕೆ ಹಗರಣದಿಂದಆರಂಭಗೊಂಡು 2ಜಿ ತರಂಗಾಂತರ ಹಂಚಿಕೆ ಮತ್ತು ವಿಐಎಸ್ ಲಂಚ ಪ್ರಕರಣಗಳ ಆರೋಪಗಳಿಗೆ ಅತ್ಯಲ್ಪ ಮಾನ್ಯತೆ ನೀಡಿದರು.

ಔಪಚಾರಿಕವಾಗಿ ಪತ್ರಿಕಾ ಗೋಷ್ಠಿ ಏರ್ಪಡಿಸಲಾಗಿತ್ತು. ಪ್ರಹಸನದಂತೆಅದುಅಂತ್ಯವಾಯಿತು.

*******